ಹೆಚ್ಚೆಂದರೆ ಬೆಳಗಿನ ಪ್ರೇಯರ್‌ಗೆ ಬಂದವರು ಮಧ್ಯಾಹ್ನದ ಬಿಸಿಯೂಟದ ತನಕ ಮಾತ್ರವೇ ಇರುತ್ತಿದ್ದರು. ಬಿಸಿಯೂಟ ಮುಗಿದಾದರೂ ಮಕ್ಕಳು ಇನ್ನೂ ಶಾಲೆಯಲ್ಲೇ ಇದ್ದರೆಂದರೆ ಅವರ ಅಪ್ಪ ಅಮ್ಮನೇ ಬಂದು 'ಮೇಡಮ್ಮೋರೆ, ನಮ್ಮುಡ್ಗ ಮನೆಲಿರುವ ಸಣ್ಣ ಮಗ ನೋಡ್ಕೆಂಬೇಕು, ಇಲ್ಲವೆ ಸೊಸೈಟಿತಕೆ ರೇಷನ್ ತರಕೆ ಹೋಗ್ಬೇಕು, ಅವ್ರಜ್ಜಿ ಊರಿಗೆ ಹೋಗ್ಬೇಕು, ನಾಳಿಕೆ ವಾರ ಮಾಡಕೆ ನೀರು ತರಬೇಕು, ಆಡು ಬಿಟ್ಕಂಡು ಹೋಗ್ಬೇಕು ಕಳುಸ್ರಿ' ಎಂದು ಒಂದೇ ಉಸುರಿಗೆ ಬರುತ್ತಿದ್ದರು. ಮೇಡಮ್ ಏನಾದರೂ ಕಳಿಸಲ್ಲ ಇರ್ರಿ ಅಂದ್ರೆ, ಇನ್ನು ಏನ್ ಕೂತಿದಿಯ ಎದ್ದು ಬಾರ್ಲ ಎಂದು ಸೌಜನ್ಯಕ್ಕೂ ಮೇಡಮ್‌ನ ಲೆಕ್ಕಕ್ಕಿಟ್ಟುಕೊಳ್ಳದೆ ಎಬ್ಬಿಸಿಕೊಂಡು ಹೋಗುತ್ತಿದ್ದರು. ಇದನ್ನು ಹೇಗೆ ತಡೆಯುವುದೆಂದು ತಲೆಕೆಡಿಸಿಕೊಂಡ ವಸಂತ ಮೇಡಮ್ಮು ಸಂಜೆ ತನಕ ಇದ್ದವರಿಗೆ ಬಿಸ್ಕೇಟ್ ತರಿಸಿಕೊಡುತ್ತೇನೆ, ಚಾಕ್ಲೆಟ್ ಕೊಡಿಸುತ್ತೇನೆ, ಬೋಂಡ ಮಾಡಿಸಿಕೊಡುತ್ತೇನೆ ಇತ್ಯಾದಿ ಆಮಿಷ ಒಡ್ಡಿ ಸ್ವಂತ ಖರ್ಚಿನಲ್ಲೇ ಇದನ್ನೆಲ್ಲ ಮಾಡುತ್ತಿದ್ದುದರಿಂದ ಪೂರ್ಣವಾಗಲ್ಲದಿದ್ದರೂ ಸ್ವಲ್ಪಮಟ್ಟಿಗೆ ಸುಧಾರಿಸಿತ್ತು.

ಹೀಗೆ ಪದೇಪದೆ ಗೈರಾಗುತ್ತಿದ್ದ ಗಡ್ಗನ ಮಗ ಸಿದ್ದನನ್ನು ಎಲ್ಲೋದ್ಲೊ ಸಿದ್ದ! ಅಂತ ಕೇಳಿರೆ, ಉಳಿದ ಮಕ್ಕಳು 'ಅವ್ನು ದೇವ್ರು ಹೊರ್‍ಸ್ಬಿತ್ತು ಅದರಿಂದೆ ತಮಟೆ ಬಡಿಯಾಕೆ ಹೋದ ಟೀಚರ್' ಎನ್ನುತ್ತಿದ್ದರು. ಪದೆ ಪದೆ ಅವನ ಈ ತಮಟೆ ಸುದ್ದಿ ಕೇಳಿ ಸಾಕಾದ ಮೇಡಮ್ ಒಂದು ದಿನ ಸಿದ್ದನನ್ನು, 'ತಮಟೆ ತಗಂಡು ಸ್ಕೂಲ್‌ತಕೆ ಬರ್‍ಬೇಕಂತೆ' ಅಂತ ಹೇಳಿಕಳುಹಿಸಿದರು. ಈ ಸುದ್ದಿ ಕೇಳಿದ್ದೆ ಮಲಗಿದ್ದವನು ಎದ್ದು ಹೆಗಲಿಗೆ ತಮಟೆ ನೇತಾಕಿಕೊಂಡು ಬಡಿಯುವ ಕೋಲು ಹಿಡಿದುಕೊಂಡು ಸಿದ್ದ ಬಂದೇ ಬಿಟ್ಟನು. ಎಲ್ಲಿ ಹೇಗೆ ಬಡಿಯುತ್ತೀಯೊ ಬಡಿ ನೋಡೋಣ ಎಂದಾಗ, ಸೊಂಟಕ್ಕೆ ಟವಲ್ ಬಿಗಿದುಕೊಂಡು ಒಂದು ಕಾಲು ಮುಂದೆ ಒಂದು ಕಾಲು ಹಿಂದೆ ಮಾಡಿಕೊಂಡು ಮಧ್ಯದಲ್ಲಿ ತಮಟೆ ಬಿಟ್ಟುಕೊಂಡು ಗಸ್ತ್ ಹಾಕ ತೊಡಗಿದನು. ಬಡಿದ... ಬಡಿದ... ತನಗೆ ಗೊತ್ತಿದ್ದ ವಿಧವಿಧವಾದ ಗಸ್ತ್‌ಗಳನ್ನು ದೊಡ್ಡವರೂ ನಾಚುವಂತೆ ನುಡಿಸಿಬಿಟ್ಟ. ಯಾರೊ ಇನ್ನೊಬ್ಬ ನೆಲಕ್ಕೆ ಟವಲ್ ಹಾಸಿ, ಟೀಚರ್‌ಗೆ ಹತ್ತುರೂಪಾಯಿ ಹಾಕುವಂತೆ ಕೈಸನ್ನೆ ಮಾಡಿದ. ಮೇಡಮ್ ಪರ್ಸ್‌ನಲ್ಲಿದ್ದ ನೂರು ರೂಪಾಯಿ ತೆಗೆದು ಟವಲ್ ಮೇಲೆ ಹಾಕಿದರು. ಕ್ಷಣಮಾತ್ರದಲ್ಲಿ ಸಿದ್ದ ತಮಟೆ ನುಡಿಸುತ್ತಲೇ ಹಿಂಭಾಗಕ್ಕೆ ಬಾಗಿ, ತಮಟೆಯನ್ನು ಎದೆಮೇಲಕ್ಕೆ ತಂದುಕೊಂಡು ತನಗೆ ಗೊತ್ತಿರುವ ವಿದ್ಯೆಯನ್ನೆಲ್ಲ ಬಳಸಿ ಗಸ್ತುಗಳನ್ನು ಬಿಡುತ್ತ ನೆಲದ ಮೇಲೆ ಅಂಗಾತ ಮಲಗಿ ನಾಲಿಗೆಯಲ್ಲಿ ಅಲ್ಲಿದ್ದ ನೂರರ ನೋಟನ್ನು ಎತ್ತಿಕೊಂಡು ಬಿಟ್ಟ. ವಸಂತ ಮೇಡಮ್ ಸಿದ್ದನ ಈ ಕಲೆಯನ್ನು ಬಿಟ್ಟಕಣ್ಣು ಬಿಟ್ಟಂತೆಯೇ ನೋಡುತ್ತ ಬೆರಗಾಗಿಬಿಟ್ಟರು. ಅಂದೇ ಡಿಸೈಡ್ ಮಾಡಿ ಮುಂದಿನ ವಾರವೇ ನಡೆಯಲಿದ್ದ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯ ಜನಪದ ಕಲಾಪ್ರದರ್ಶನಕ್ಕೆ 'ಸಿದ್ದನ ತಮಟೆ ವಾದನ' ಎಂದು ಹೆಸರು ಬರೆದುಕೊಂಡರು. ಆ ವರ್ಷದ ಇಡೀ ಪ್ರತಿಭಾಕಾರಂಜಿಯಲ್ಲಿ ಸಿದ್ದನ ತಮಟೆ ಗಸ್ತಿನದೆ ಚರ್ಚೆ. ಅದುವರೆಗೂ ಯಾರೂ ಇಂಥದ್ದೊಂದು ಕಲೆಯನ್ನು ಪ್ರದರ್ಶನಕ್ಕೆ ಇಟ್ಟಿರಲೇ ಇಲ್ಲ. ರಂಗ ಎಂಬ ಇನ್ನೊಬ್ಬ ಹುಡುಗ ಶಾಲೆಯ ಬಿಡುವಿನಲ್ಲಿ ಸದಾ ಒಂದು ಕತ್ತರಿ ಹಿಡಿದುಕೊಂಡು ಆಕಾರಗಳನ್ನು ಕತ್ತರಿಸುತ್ತಿದ್ದುದನ್ನು ಕಂಡ ಟೀಚರ್ ಅವನನ್ನು ಕರಕುಶಲ ವಸ್ತು ತಯಾರಿಕಾ ಸ್ಪರ್ಧೆಗೆ ಕಳುಹಿಸಿದ್ದರು. ಆತನಿಗೆ ಬಹುಮಾನ ಬಂದ ನಂತರ ತಿಳಿದುದೇನಂದರೆ ಸರ್ಕಲ್‌ನಲ್ಲಿ ಕೂತು ಚಪ್ಪಲಿ ಹೊಲೆಯುವ ಹನುಮಯ್ಯನೇ ರಂಗನ ಅಜ್ಜ ಎಂದು. ಸಿದ್ದ ಮತ್ತು ರಂಗ ತಾಲ್ಲೂಕ್, ಜಿಲ್ಲಾಮಟ್ಟಕ್ಕೂ ಆಯ್ಕೆಯಾಗಿ ಪ್ರಶಸ್ತಿ ಪಡೆದುಕೊಂಡರು. ಆ ಶಾಲೆಯ ಮಟ್ಟಿಗೆ ಬಂದ ಮೊದಲ ಜೋಡಿ ಬಹುಮಾನಗಳು ಇವೇ ಆಗಿದ್ದವು. ಊರ ತುಂಬಾ ಇದು ಚರ್ಚೆಯಾಯಿತು. ಸಿದ್ದನಂತೂ ದಿನವೂ ಶಾಲೆಗೆ ಬರತೊಡಗಿದ.

ವಸಂತ ಮೇಡಮ್‌ರವರ ಭಿನ್ನ ಪ್ರಯತ್ನಗಳಿಂದಾಗಿ ಮಾದಿರ್ ಶಾಲೆ ಇಂಚಿಂಚೇ ತನ್ನ ಹಳೆ ಸ್ವರೂಪವನ್ನು ಬದಲಾಯಿಸಿಕೊಂಡು ಬೇರೆ ರೀತಿಯಲ್ಲೆ ಗಮನಸೆಳೆಯತೊಡಗಿತು. ಎಂದೂ ನೆರವೇರದ ಪೋಷಕರ ಸಭೆಗಳನ್ನು ಶಾಲೆಯಲ್ಲಿ ಕರೆಯತೊಡಗಿದರು. ಇಂಥದೊಂದು ಸಭೆ ಇದೆ, ಇದರಲ್ಲಿ ಭಾಗವಹಿಸಬೇಕೆಂಬುದೇ ತಿಳಿದಿರದ ಪೋಷಕರು ಒಮ್ಮೆ ಮಕ್ಕಳ ಚಿತ್ರ ಹಿಂಸೆ ತಡೆಯಲಾರದೆ 'ಇವ್ರ ಸಾಕ್ಗೋಳ್ನಾಕ್ಯಾಯ' ಎಂದು ಒಂದು ಶನಿವಾರ